ಈ ಸಲಿಗೆ ಎಲ್ಲಿ ಸಾಧ್ಯ? ಅವು ಐದಾರು ಫೂಟು ಎತ್ತರದ ಕಾಲ್ನಡೆಗಳು. ಜೀನಿನ ಮೇಲೆ ಕಾಲಿಟ್ಟು ಏರುವುದೊಂದು ಹರಸಾಹಸ. ಬ್ರಿಟಿಶರ ಕಾಲದಲ್ಲಿ ಎಷ್ಟೊ ಪ್ರತಿಭಾವಂತರು ಲಂಡನ್ನಿಗೆ ಹೋಗಿ ಐಸಿಎಸ್ ಪರೀಕ್ಷೆಯನ್ನು ಚಿಟಕಿ ಹೊಡೆದಂತೆ ಪಾಸು ಮಾಡುತ್ತಿದ್ದರು. ಕುದುರೆ ಸವಾರಿಯಲ್ಲಿ ಸೋತು ಸಪ್ಪೆಮುಖದಲ್ಲಿ ಮರಳುತ್ತಿದ್ದರು. ಕೆಲವರು ಸವಾರಿಸುವ ಕಾಲಕ್ಕೆ ಬಿದ್ದು ಪ್ರಾಣ ಬಿಟ್ಟಿರುವುದೂ ಇದೆ. ಇಂತಹ ಮಾರಣಾಂತಿಕ ಘಟನೆಗಳು ಗಾರ್ದಭ ಚರಿತ್ರೆಯಲ್ಲಿಲ್ಲ. ಬಹಳೆಂದರೆ ಹಿಂಗಾಲನ್ನು ಚಿಮ್ಮಿಸಿ ಸಿಕ್ಸರೆತ್ತಿದಂತೆ ಒದೆಯಬಹುದು. ಬಾಲಕ್ಕೆ ಡಬ್ಬಕಟ್ಟಲೊ ಪಟಾಕಿಸರ ಸಿಕ್ಕಿಸಲೊ ಬರುವ ಪೋಕರಿಗಳಿಂದ, ಆತ್ಮರಕ್ಷಣೆಗೆ ಇಷ್ಟಾದರೂ ಬೇಡವೇ?

ಈಜಿಪ್ತದಿಂದ ಹೊರಡುವ ಮುನ್ನ, ಬಂಡಿಗೆಲಸದಿಂದ ಆಗಷ್ಟೆ ಬಿಡುಗಡೆಗೊಂಡು ವಿಶ್ರಾಂತ ಭಂಗಿಯಲ್ಲಿ ಮೆಲುಕು ಹಾಕುತ್ತಿದ್ದ ಒಂದು ಕತ್ತೆಯ ಬಳಿಸಾರಿ, ''ಭಾರತದಲ್ಲಿರುವ ನಿನ್ನ ಸೋದರರಿಗೆ ಕೊಡುವ ಸಂದೇಶವೇನು?'' ಎಂದು ಭಯಭಕ್ತಿಯಿಂದ ಕೇಳಿದೆ. 'ನೆಮ್ಮದಿಯ ಬಾಳು ಬೇಕಾದಲ್ಲಿ ಈಜಿಪ್ತದಲ್ಲಿ ಹುಟ್ಟಲು ಹೇಳು: ಬಿಟ್ಟಿಚಾಕರಿ ಅಪಮಾನ ಹೆಚ್ಚಾದಲ್ಲಿ ಸ್ವಾತಂತ್ರ್ಯ ಹೋರಾಟಕ್ಕಾಗಿ ಹಿಂಗಾಲಿನ ಹತ್ಯಾರಗಳನ್ನು ಬಳಸಲು ಸೂಚಿಸು' ಎಂಬರ್ಥದಲ್ಲಿ ಒಸಡುಗಳಿಂದ ಮಣಮಣಿಸಿತು; ''ನನಗೂ ಮುಂದಿನ ಜನ್ಮದಲ್ಲಿ ಈಜಿಪ್ಟಿನಲ್ಲಿ ರೈತನಾಗಿ ಹುಟ್ಟುವ ಉದ್ದೇಶವಿದೆ. ನೈಲ್‌ತಟದಲ್ಲಿ ಹಚ್ಚಗೆ ಬೆಳೆದ ಹಸಿರನ್ನು ನನ್ನ ಕತ್ತೆಗಳು ಸುಖವಾಗಿ ಮೇಯುವುದನ್ನು ಕಂಡು ಆನಂದಿಸಬೇಕು. ಅವುಗಳ ಸವಾರಿಸಿಕೊಂಡು ನಿಷೇಧಿತ ಹೊಸಕೈರೊದಲ್ಲಿ ಸುತ್ತಾಡಬೇಕು. ನೈಲ್ ಹೊಳೆಗುಂಟ ನಿಮ್ಮ ಪೂರ್ವಜರಿದ್ದ ಆಫ್ರಿಕನ್ ಕಾಡುಗಳಿಗೆ ಪಯಣಿಸಬೇಕು. ಸಹರಾದಲ್ಲಿ ವಿಹರಿಸಬೇಕು' ಎಂಬ ಬಯಕೆ ಮುಂದಿಟ್ಟೆ. ಆಗದು ಮೇಘಗರ್ಜನೆಯಂತೆ ಹೊಂಯ್ಕರಿಸಿತು. ಆತ್ಮಸಂತೋಷದಿಂದ 'ಆಮೆನ್' ಎಂದಿತೊ, 'ನಮ್ಮ ಕುಲದಲ್ಲಿ ಹುಟ್ಟಿ ಕಷ್ಟಪಡಲು ಧೈರ್ಯವಿಲ್ಲದ ಹಂದೆ. ನರಪ್ರಾಣಿಯಾಗಿ ಹುಟ್ಟಿ ನಮ್ಮನ್ನೇರಿ ವಿಹರಿಸುತ್ತಾನಂತೆ. ಇವನ ಚಾಲಾಕಿ ನೋಡು' ಎಂದು ಭರ್ತ್ಸನೆ ಮಾಡಿತೊ ತಿಳಿಯದೆ ಹೋಯಿತು. ಬಹುಶಃ ಅದಕ್ಕೆ ನನ್ನ ಬಯಕೆ ಒಪ್ಪಿಗೆಯಾಗಿರಬಹುದು. ಸಣ್ಣಪುಟ್ಟ ಆಸೆಗಳೇ ಬಾಳ ಚೆಲುವನ್ನು ಹೆಚ್ಚಿಸುವುದನ್ನು ಜ್ಞಾನಿಯಾದ ಅದು ಬಲ್ಲದು. ಒಂದೊಮ್ಮೆ ಬೈದಿದ್ದರೂ ಆಶ್ಚರ್ಯವಲ್ಲ. ಯಾಕೆಂದರೆ, ಶ್ರಮಿಕರ ಸಹನೆಯನ್ನು ಗುಣಗಾನಿಸುವವರೂ ನಾಜೂಕಿನಿಂದ ಅವರ ಚಾಕರಿಯನ್ನೇ ಸೆಳೆಯುತ್ತಿರುತ್ತಾರೆ. ಪಶುಪಕ್ಷಿಗಳ ಭಾಷೆ ಕಾರ್ಣಿಕದ ವಾಕ್ಕು. ಅದರರ್ಥ ಮನುಷ್ಯಮಾತ್ರರ ಅಳವಿಗೆ ಮೀರಿದ್ದು. ಭಾಷೆ ಅರ್ಥವಾಗಿ ಹುಟ್ಟಿಸುವ ಭಾವಕ್ಕಿಂತ ಅರ್ಥವಾಗದೆ ಚಿಮ್ಮಿಸುವ ಹೊಳಹು ಹೆಚ್ಚು ಗೂಢವಾಗಿರುತ್ತದೆ. ಗಾರ್ದಭ ಲೀಲಾವಿಲಾಸಕ್ಕೆ ಎಲ್ಲೆಯೆಲ್ಲಿದೆ?


**ರಹಮತ್ ತರೀಕೆರೆ**

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯವರು. ಸಾಹಿತ್ಯ ವಿಮರ್ಶೆ, ಸಂಶೋಧನೆ, ಪ್ರವಾಸ ಕಥನ, ವಿಚಾರ ಸಾಹಿತ್ಯ, ಜೀವನ ಚರಿತ್ರೆ, ಸಾಹಿತ್ಯ ಮೀಮಾಂಸೆ ಪ್ರಕಾರಗಳಲ್ಲಿ ಪುಸ್ತಕಗಳನ್ನು ಬರೆದಿದ್ದಾರೆ. 'ಪ್ರತಿಸಂಸ್ಕೃತಿ', 'ಮರದೊಳಗಣ ಕಿಚ್ಚು', 'ಅಂಡಮಾನ್ ಕನಸು', 'ಕತ್ತಿಯಂಚಿನ ದಾರಿ', 'ಲೋಕವಿರೋಧಿಗಳ ಜೊತೆಯಲ್ಲಿ', 'ಅಮೀರ್‌ಬಾಯಿ ಕರ್ನಾಟಕಿ', 'ನಡೆದಷ್ಟೂ ನಾಡು', 'ಕರ್ನಾಟಕ ನಾಥಪಂಥ', 'ಕರ್ನಾಟಕದ ಸೂಫಿಗಳು', 'ಕರ್ನಾಟಕ ಗುರುಪಂಥ' ಅವರ ಪ್ರಮುಖ ಪುಸ್ತಕಗಳು. ಅವರ ಲಲಿತ ಪ್ರಬಂಧಗಳ ಸಂಕಲನ 'ಹಿತ್ತಲ ಜಗತ್ತು'. ರಹಮತ್, ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸಾಹಿತ್ಯ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರು.